ಜಿಲ್ಲೆ, ಚಿತ್ರದುರ್ಗ ಜಿಲ್ಲೆಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಇರುವುದು ಮತ್ತು bore-well ತೋಡಿದ ಸಂದರ್ಭದಲ್ಲಿ Fluoride ನೀರು ಬಂದು ಅಶುದ್ಧವಾದ ನೀರನ್ನು ಪೂರೈಕೆ ಮಾಡುತ್ತಿರುವುದು ತಮ್ಮೆಲ್ಲರ ಗಮನಕ್ಕೆ ಬಂದಿದೆ. ಇವತ್ತು ಶಿರಾ ತಾಲ್ಲೂಕಿನ 111 ಗ್ರಾಮಗಳಿಗೆ ನೀರನ್ನು ಕೊಡಬೇಕೆಂದು ಹಲವಾರು ಬಾರಿ ಯೋಜನೆಗಳನ್ನು ಮಾಡಿದ್ದೇವೆ. ಇವತ್ತು ಮದಲೂರು ಕೆರೆಗೆ ಕಳ್ಳಂಬೆಳ್ಳ ಕೆರೆಯಿಂದ ನೀರನ್ನು ತುಂಬಿಸಬೇಕೆಂಬ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಹೇಗೆ ನೀರನ್ನು ಕೊಡಬಹುದು ಎನ್ನು ಬಗ್ಗೆ ಅಗತ್ಯವಾದ ಮೂಲವನ್ನು ಕಂಡುಹಿಡಿಯುವ ಒಂದು ಸರ್ವೆ ಕಾರ್ಯ ಮಾಡಬೇಕೆನ್ನುವ ವಿಚಾರ ಕೂಡ ಸರ್ಕಾರದ ಮುಂದಿದೆ. ಸರ್ವೆ ಮಾಡುವ ಕಾರ್ಯಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಲಾಗಿದೆ. ಸಮಿತಿಯು ಇನ್ನು 2–3 ತಿಂಗಳಲ್ಲಿ ವರದಿ ಕೊಡಬೇಕೆಂದು ಅದೇಶವನ್ನು ಕೊಡಲಾಗಿದೆ. ಈ ಸಂದರ್ಭದಲ್ಲಿ ಮಾನ್ಯ ಶಾಸಕರು ಹೇಳಿದಂತೆ ಕಳ್ಳಂಬೆಳ್ಳ ಕೆರೆಗೆ ನೀರನ್ನು ತುಂಬಿಸಬೇಕಾದರೆ ಹೇಮಾವತಿಯಿಂದ ನೀರು ಬರಬೇಕೆನ್ನುವುದರಲ್ಲಿ ಸತ್ಯವಿದೆ. ಏಕೆಂದರೆ, ಬೇರೆ ಯಾವುದೇ ಮೂಲದಿಂದ ನೀರನ್ನು ಕೊಡಲು ಆಗುವುದಿಲ್ಲ. ಆ ಕಾರಣಕ್ಕಾಗಿ ನಾವು ಇವತ್ತು ಜಲ ಸಂಪನ್ಮೂಲ ಇಲಾಖೆಯನ್ನು ಸಂಪರ್ಕ ಮಾಡಿದ್ದೇವೆ. ರಾಜ್ಯದಲ್ಲಿ ಈ ರೀತಿ ಎಲ್ಲೆಲ್ಲಿ ಮುಖ್ಯವಾಗಿ Fluoride ನೀರಿದೆ ಮತ್ತು ಕುಡಿಯಲಿಕ್ಕೆ ಯೋಗ್ಯವಲ್ಲದ ಪ್ರದೇಶಗಳಿವೆ, ನೀರಿನ ಮೂಲಗಳಿವೆ ಅಂತಹ ಕಡೆ ನಮಗೆ ನದಿ ಮೂಲದಿಂದ ಅಥವಾ ಕೆರೆ ಮೂಲದಿಂದ ನೀರನ್ನು ಕೊಡಬೇಕೆಂದು ಜಲಸಂಪನ್ಮೂಲ ಇಲಾಖೆಗೆ ವಿನಂತಿ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಕಳ್ಳಂಬೆಳ್ಳ ಕೆರೆಗೆ ನೀರನ್ನು ತುಂಬಿಸುವ ರೀತಿಯಲ್ಲಿ ನಾವು ಕ್ರಮವನ್ನು ಕೈಗೊಳ್ಳುತ್ತೆವೆ ಎನ್ನುವ ಮಾತನ್ನು ಶಾಸಕರಿಗೆ ಹೇಳಬಯಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಆ ಬಗ್ಗೆ ಪ್ರಾಧಿಕಾರ ರಚನೆ ಮಾಡುವಿರಾ?

ಶ್ರೀಮತಿ ಶೋಭಾ ಕರಂದ್ಲಾಜೆ: ಪ್ರಾಧಿಕಾರ ರಚನೆ ಮಾಡುವ ಬಗ್ಗೆ ಪರಿಶೀಲನೆ ಮಾಡಲಾಗುವುದು.

ಜಿಲ್ಲಾ ಪಂಚಾಯತ್ ರಸ್ತೆಗಳ ನಿರ್ವಹಣೆ

28 (141) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಕಿ.ಮೀ. ರಸ್ತೆಯು ಜಿಲ್ಲಾ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುತ್ತದೆ ಹಾಗೂ ಈ ರಸ್ತೆಗಳು ಯಾವುವು;

(ಆ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಈ ರಸ್ತೆಗಳ ದುರಸ್ತಿ ಹಾಗೂ ನಿರ್ವಹಣೆಗಾಗಿ ಪ್ರತಿ ವರ್ಷ ಮಾಡಲಾದ ಹಣವೆಷ್ಟು; (ರಸ್ತೆವಾರು ವಿವರಗಳನ್ನು ಒದಗಿಸುವುದು)

(ಇ) ಪ್ರತಿ ವರ್ಷ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರೂ ಸಹ ಬಹುತೇಕ ರಸ್ತೆಗಳು ಅತ್ಯಂತ ದುರಸ್ತಿಯಲ್ಲಿದ್ದು, ಇದರಿಂದಾಗಿ ಜನ ಸಂಚಾರ ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಹಾಗಿದ್ದಲ್ಲಿ, ಈ ರಸ್ತೆಗಳ ದುಸ್ಥಿತಿಗೆ ಕಳಪೆ ಕಾಮಗಾರಿಯು ಕಾರಣವೆಂಬುದು ಸರ್ಕಾರಕ್ಕೆ ತಿಳಿದಿದೆಯೆ;

(ಉ) ಹಾಗಿದ್ದಲ್ಲಿ ಈ ಕಳಪೆ ಕಾಮಗಾರಿಗೆ ಕಾರಣವಾಗಿರುವ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ವಿರುದ್ಧ ಸರ್ಕಾರ ಯಾವ ಶಿಸ್ತಿನ ಕ್ರಮ ಕೈಗೊಳ್ಳುವುದು;

(ಊ) ಗಡಿ ಭಾಗವಾದ ಭಾಲ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಉತ್ತಮ ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆಗಾಗಿ ಸರ್ಕಾರದ ಮುಂದಿರುವ ಕ್ರಮಗಳೇನು? ಇದಕ್ಕಾಗಿ ಈ ಆಯವ್ಯಯದಲ್ಲಿ ಎಷ್ಟು ಹಣವನ್ನು ಮೀಸಲಾಗಿಡಲಾಗುವುದು?

ಶ್ರೀಮತಿ ಶೋಭಾ ಕರಂದ್ಲಾಜೆ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

(ಅ), ಬೀದರ್ ಜಿಲ್ಲೆಯ ಭಾಲ್ಕಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 481.20 ಕಿ.ಮೀ ಉದ್ದದ ಗ್ರಾಮೀಣ ರಸ್ತೆಗಳು ಇರುತ್ತವೆ. ರಸ್ತೆವಾರು ಪಟ್ಟಿಯನ್ನು ಅನುಬಂಧ–1 ರಲ್ಲಿ ಲಗತ್ತಿಸಲಾಗಿದೆ.

(ಆ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಈ ರಸ್ತೆಗಳ ದುರಸ್ತಿ ಹಾಗೂ ನಿರ್ವಹಣೆಗಾಗಿ ವೆಚ್ಚ ಮಾಡಿದ ವಿವರಗಳು ಈ ಕೆಳಗಿನಂತೆ ಇರುತ್ತವೆ.

ಕ್ರ.ಸಂ.	ವರ್ಷ	ವೆಚ್ಚ (ರೂ. ಲಕ್ಷಗಳಲ್ಲಿ)
1	2005–06	7.32
2	2006–07	115.35
3	2007–08	128.21
	ಒಟ್ಟು	**250.88**

ರಸ್ತೆವಾರು ವಿವರಗಳನ್ನು ಅನುಬಂಧ–2ರಲ್ಲಿ ಲಗತ್ತಿಸಿದೆ.

(ಇ) ಬಂದಿದೆ.

(ಈ) ತಾಲ್ಲೂಕಿನ ಬಹುತೇಕ ರಸ್ತೆಗಳು ಕಪ್ಪು ಮಣ್ಣಿನಲ್ಲಿ ಹಾಯ್ದು ಹೋಗಿರುವುದರಿಂದ ಹಾಗೂ ರಸ್ತೆಗಳ ಮೇಲೆ ವಾಹನಗಳ ಸಾಂದ್ರತೆ ಹೆಚ್ಚಾಗಿರುವುದರಿಂದ ರಸ್ತೆಗಳು ಹಾಳಾಗಿರುವುದಕ್ಕೆ ಮುಖ್ಯ ಕಾರಣವಾಗಿದೆ.

(ಉ) ಅನ್ವಯಿಸುವುದಿಲ್ಲ.

(ಊ) ಪ್ರಸಕ್ತ ಸಾಲಿನಲ್ಲಿ ಗ್ರಾಮೀಣ ರಸ್ತೆಗಳ ನಿರ್ವಹಣೆಗಾಗಿ ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿ ಒದಗಿಸಲಾದ ಅನುದಾನದಲ್ಲಿ ಮತ್ತು ಕೇಂದ್ರ ಸರ್ಕಾರದ ಹಣಕಾಸಿನ ನೆರವಿನ 12ನೇ ಹಣಕಾಸು ಆಯೋಗದ ಯೋಜನೆಯಡಿ ಒದಗಿಸಲಾದ ಅನುದಾನದಲ್ಲಿ ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆಯನ್ನು ತೆಗೆದುಕೊಳ್ಳಲಾಗುತ್ತದೆ. ಅದರಂತೆ, ಭಾಲ್ಕಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ರಸ್ತೆಗಳನ್ನು ಸಹ ನಿರ್ವಹಣೆ ಮಾಡಲಾಗುವುದು.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರಿಸುತ್ತಾ, ರಸ್ತೆಗಳು ಹಾಳಾಗಿರುವ ಬಗ್ಗೆ ಒಪ್ಪಿಕೊಂಡಿದ್ದಾರೆ. ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕಿನಲ್ಲಿ ಮಾನ್ಯ ಸಚಿವರು ಹೇಳಿದ ಪ್ರಕಾರ ಈ ರಸ್ತೆಗಳು ಹಾಳಾಗಿರುವುದಕ್ಕೆ ವಾಹನಗಳ ಸಂಚಾರವೇ ಕಾರಣ ಎಂದು ಹೇಳಿರುವುದು ಸತ್ಯಕ್ಕೆ ದೂರವಾದ ಸಂಗತಿ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅಧಿಕಾರಿಗಳು ಮಾನ್ಯ ಸಚಿವರ ಮೂಲಕ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆಂದು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ನಮ್ಮ ತಾಲ್ಲೂಕಿನಲ್ಲಿ ವಾಹನಗಳ ಸಂಖ್ಯೆ ಬಹಳ ಕಡಿಮೆಯಿದೆ ಹಾಗಾಗಿ ವಾಹನ ಸಂಚಾರದಿಂದ ರಸ್ತೆಗಳು ಕೆಟ್ಟಿದೆ ಎಂದು ಹೇಳುವುದು ಸುಳ್ಳಾಗುತ್ತದೆ. ಅದುದರಿಂದ ಇದರ ಬಗ್ಗೆ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತಾ ಈ ರಸ್ತೆಗಳು ಇಷ್ಟು ಬೇಗ ಹಾಳಾಗಲು ಕಳಪೆ ಕಾಮಗಾರಿಗಳು ಕಾರಣವಾಗಿರುವುದರಿಂದ ಇದರ ಬಗ್ಗೆ ತನಿಖೆಗೆ ಆದೇಶ ಮಾಡಬೇಕೆಂದು ನಾನು ಕೋರುತ್ತೇನೆ.

ಶ್ರೀಮತಿ ಶೋಭಾ ಕರಂದ್ಲಾಜೆ (ಗ್ರಾಮೀಣಾಭಿವೃದ್ಧಿ ಸಚಿವರು) ಸನ್ಮಾನ್ಯ ಸಭಾಧ್ಯಕ್ಷರೆ, ಅತ್ಯಂತ ವಿಸ್ತೃತ ಉತ್ತರವನ್ನು ಇಲ್ಲಿ ಒದಗಿಸಲಾಗಿದೆ. ಮುಖ್ಯವಾಗಿ, ಇವತ್ತು ಗ್ರಾಮೀಣ ರಸ್ತೆಗಳಿಗೆ per k.m ಗೆ allocation ಆಗುತ್ತಾ ಇರುವಂತಹ ಹಣ ಬಹಳ ಕಡಿಮೆಯಾಗಿದೆ. ಒಟ್ಟಾರೆ ನಮ್ಮ ರಾಜ್ಯದಲ್ಲಿ ಮಳೆ ಮತ್ತು ಮಣ್ಣಿನ ಪರಿಸ್ಥಿತಿ ನೋಡಿಕೊಂಡು

ಹೆಚ್ಚು ದುಡ್ಡು ಇಡಬೇಕಾದಂತಹ ಅಗತ್ಯವಿದೆ. ಇದು Policy decision ಕೂಡ ಆಗಬೇಕಾಗುತ್ತದೆ. ಅಲ್ಲಿ ರಸ್ತೆಗಳನ್ನು ಕಪ್ಪು ಮಣ್ಣಿನಿಂದ ಮಾಡಿರುವುದರಿಂದ ಮತ್ತು ಕಡಿಮೆ ಹಣ ಬಳಕೆ ಮಾಡಿರುವ ಕಾರಣ ರಸ್ತೆಗಳು ಹಾಳಾಗಿರವುದು ನಿಜವಿದೆ. ಆದರೆ ಮಾನ್ಯ ಶಾಸಕರು ಹೇಳಿದಂತೆ ಆ ಭಾಗದಲ್ಲಿ ಅವ್ಯವಹಾರ ನಡೆದಿಲ್ಲ. Particular ಆಗಿ ಇರತಹ ಭಾಗದಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಮಾನ್ಯ ಶಾಸಕ ಹತ್ತಿರ ಏನಾದರೂ ಮಾಹಿತಿ ಇದ್ದರೆ ದಯಮಾಡಿ ನಮಗೆ ಒದಗಿಸಬೇಕೆನ್ನುವ ಮಾತನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ : ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾದರೂ ಗಡಿಭಾಗವಾದ ನನ್ನ ಮತ ಕ್ಷೇತ್ರ ಭಾಲ್ಕಿಯ ನೆಲವಾಡ ಚಳಕಾಪುರ ಗ್ರಾಮಕ್ಕೆ ಇವತ್ತಿನವರೆಗೂ ರಸ್ತೆ ಇಲ್ಲ. ಮಳೆಯಾದರೆ ಈ ಗ್ರಾಮಗಳು ದ್ವೀಪಗಳಾಗುತ್ತವೆ. ಈ ಗ್ರಾಮಗಳಿಗೆ ಬೇರೆ ಕಡೆಯಿಂದ ಸಂಪರ್ಕವೇ ಇರುವುದಿಲ್ಲ. ಆದ್ದರಿಂದ, ಈ ಗ್ರಾಮಗಳಿಗೆ ರಸ್ತೆ ಮಾಡುವ ಬಗ್ಗೆ ಸರ್ಕಾರದ ಮುಂದಿರುವ ಕ್ರಮಗಳೇನು? ಈ ಹಣಕಾಸು ವರ್ಷದಲ್ಲಿ ಕನಿಷ್ಠ ಈ ಒಂದು ರಸ್ತೆಗಾದರೂ ಡಾಂಬರೀಕರಣ ಮಾಡುವಂಥ ಕೆಲಸ ಆಗುತ್ತದೆಯೇ ಎಂದು ಈ ಸಂದರ್ಭದಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀಮತಿ ಶೋಭಾ ಕರಂದ್ಲಾಜೆ:– ಮಾನ್ಯ ಸಭಾಧ್ಯಕ್ಷರೆ, ರಾಜ್ಯದ ಬಜೆಟ್‌ನಲ್ಲಿ ಮತ್ತು ಕೇಂದ್ರದ ಪ್ರಧಾನ ಮಂತ್ರಿ ಗ್ರಾಮೀಣ ಸಡಕ್ ಯೋಜನೆಯಲ್ಲಿ ಭಾಲ್ಕಿ ತಾಲ್ಲೂಕಿನಲ್ಲಿ ಹಲವಾರು ರಸ್ತೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇವತ್ತಿನ ದಿವಸ ಬೇರೆ ಬೇರೆ ಹೆಡ್ ಮೂಲಕ ದುಡ್ಡು ಬಿಡುಗಡೆಯಾಗುತ್ತಿದ್ದರೂ ಕೂಡ ಅಲ್ಲಿ ಟೆಂಡರ್ ಕರೆಯತಕ್ಕಂಥ ಕೆಲಸ ಬೇರೆ ಬೇರೆ ಕಾರಣಗಳಿಂದ ಅಭಿವೃದ್ಧಿ ಕೆಲಸ ಮುಂದೂಡಲಾಗುತ್ತಿದೆ. ಆದ್ದರಿಂದ, ಈ ಸಂದರ್ಭದಲ್ಲಿ ಎಲ್ಲಾ ಮಾನ್ಯ ಶಾಸಕರುಗಳಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ, ಇವತ್ತಿನ ದಿವಸ ಗ್ರಾಮೀಣ ಅಭಿವೃದ್ಧಿ ಇಲಾಖೆಯಲ್ಲಿ ಕುಡಿಯುವ ನೀರಿಗೆ ಮತ್ತು ರಸ್ತೆ ಕೆಲಸಕ್ಕೋಸ್ಕರ ಸಾಕಷ್ಟು ಹಣ ಇದೆ. ಆದರೆ, ಈ ವರ್ಷದ ಅರ್ಧ ಅವಧಿ ಚುನಾವಣೆ ಎಂಬ ಕಾರಣಕ್ಕಾಗಿ, ಹಲವಾರು ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಕರೆದು ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಈಗಾಗಲೇ ಅರ್ಧ ವರ್ಷ ಕಳೆದು ಹೋಗಿದೆ. ಉಳಿದಿರುವ ಅರ್ಧ ವರ್ಷದಲ್ಲಿ ಎಲ್ಲಾ ಕಾಮಗಾರಿಗಳನ್ನು ತಾವು ಪೂರ್ಣಮಾಡಬೇಕಾಗಿದೆ. ಆದ್ದರಿಂದ, ದಯಮಾಡಿ ಎಲ್ಲಾ ಶಾಸಕರುಗಳು ಈ ಒಂದು ಅಭಿವೃದ್ಧಿ ಕಾರ್ಯಗಳ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು. ಮತ್ತೆ ಭಾಲ್ಕಿ ತಾಲ್ಲೂಕಿಗೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ಹೇಳಿರುವ ಹಲ್ಸಿ ಮತ್ತು

ವಗಲ್ಗಾಂವ್, ಕೊರೂರು ಮತ್ತು ಗೊರೆಚಿಂಚೋಳಿ, ಮೆಹಕಾರ ಮತ್ತು ವಾಜುಗಾಳ, ಹುಳಸಿಗಾಂವ್ ಮತ್ತು ಅಲವಾಹಿ, ಬರ್ದಾಪುರ ಮತ್ತು ಕಾಸಿಮಪುರ ಗ್ರಾಮೆಗಳ ಪ್ರಮುಖ ರಸ್ತೆಗಳನ್ನು ಪ್ರಧಾನ ಮಂತ್ರಿ ಗ್ರಾಮೀಣ ಸಡಕ್ ಯೋಜನೆ ಅಡಿಯಲ್ಲಿ ತೆಗೆದುಕೊಳ್ಳಲಾಗಿದೆ. ಈಗಾಗಲೇ ಮೂರು ಕಾಮಗಾರಿಗಳು ಮುಗಿದಿವೆ. ಇದರಲ್ಲಿ ಕೊನೆಯದಾಗಿ ಹುಳಸಿಗಾಂವ್ ಮತ್ತು ಬರ್ದಾಪುರ ಗ್ರಾಮಗಳ ರಸ್ತೆಗಳ ಗುತ್ತಿದೆ ಪ್ರಗತಿಯಲ್ಲಿವೆ. ಈ ಎಲ್ಲಾ ಯೋಜನೆಗಳ ಮೂಲಕ ಆ ಭಾಗದ ರಸ್ತೆಗಳ ಅಭಿವೃದ್ಧಿಯನ್ನು ತೆಗೆದುಕೊಳ್ಳುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ಸದನದ ಗಮನಕ್ಕೆ ತಿಳಿಸುವುದಕ್ಕೆ ಬಯಸುತ್ತೇನೆ.

(39) **ಶ್ರೀ ಕುಮಾರಸ್ವಾಮಿ ಹೆಚ್.ಕೆ.(ಸಕಲೇಶಪುರ)**:– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಭಾರಿ ಮಳೆಯಿಂದಾಗಿ ಮಲೆನಾಡು ತಾಲ್ಲೂಕುಗಳಲ್ಲಿ ಜಿಲ್ಲಾ ಪಂಚಾಯತ್ ರಸ್ತೆಗಳು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಸಕಲೇಶಪುರ ಕ್ಷೇತ್ರ ಮಲೆನಾಡು ಪ್ರದೇಶವಾಗಿದ್ದು, ರಸ್ತೆಗಳು ಹದಗೆಟ್ಟಿರುವುದು ಸರ್ಕಾರದ ಗಮನದಲ್ಲಿದೆಯೇ?

(ಇ) ಪ್ರತಿ ವರ್ಷ ಭಾರಿ ಮಳೆ ಬೀಳುವುದು ನಿಯಮಿತವಾಗಿರುವುದರಿಂದ ಸರ್ಕಾರದ ವಿಶೇಷ ಅನುದಾನವನ್ನು ನಿಗದಿ ಮಾಡಿ ಬಿಡುಗಡೆ ಮಾಡಲಾಗುವುದೇ?

ಶ್ರೀಮತಿ ಶೋಭಾ ಕರಂದ್ಲಾಜೆ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)–

(ಅ) ಬಂದಿದೆ.

(ಆ) ಹೌದು

(ಇ) ಕಳೆದ ಸಾಲಿನಲ್ಲಿ ಬಿದ್ದ ಭಾರಿ ಮಳೆಯಿಂದಾಗಿ ಗ್ರಾಮೀಣ ರಸ್ತೆಗಳ ದುರಸ್ಥಿ ಅವಶ್ಯಕತೆ ಇರುತ್ತದೆ. ಪ್ರಸಕ್ತ ಸಾಲಿನಲ್ಲಿ ಆಯವ್ಯಯದಲ್ಲಿ ಒದಗಿಸಲಾದ ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ ಹಾಗೂ ಕೇಂದ್ರ ಸರ್ಕಾರದ ಹಣಕಾಸಿನ ನೆರವಿನ 12ನೇ ಹಣಕಾಸು ಆಯೋಗದ ಯೋಜನೆಯಡಿ ಒದಗಿಸಲಾದ ಅನುದಾನದಲ್ಲಿ ಈ ರಸ್ತೆಗಳ ನಿರ್ವಹಣೆ ಕೈಗೊಳ್ಳಲಾಗುವುದು.

ಶ್ರೀ ಹೆಚ್. ಕೆ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನನಗೆ ಉತ್ತರವನ್ನು ಕಳುಹಿಸಿಕೊಟ್ಟಿದ್ದಾರೆ. ಮತ್ತೆ ರಸ್ತೆಗಳು ಹದಗೆಟ್ಟಿರುವ ಬಗ್ಗೆ ಮತ್ತು ಅನುದಾನದ